

# ಪ್ರಣಾಮ್ ಜಾಕಿರ್ ಭಾಯ್!

**-ರಾಕೇಶ್ ಚೌರಾಸಿಯ**
ಬಾನ್ಸುರಿ ವಾದಕ

ವಿಶ್ವ ಸಂಗೀತ ನಕಾಶೆಯಲ್ಲಿ ಬಹು ಎತ್ತರದಲ್ಲಿರುವ ಹೆಸರು ನಮ್ಮ ಜಾಕಿರ್ ಭಾಯ್ ಅವರದು. ನಾನು ಚಿಕ್ಕ ಹುಡುಗನಿದ್ದಾಗಿನಿಂದಲೂ ಜಾಕಿರ್ ಅವರನ್ನು ಹತ್ತಿರದಿಂದ ಬಲ್ಲೆ. ನಾನು, ಹರೀಜಿ (ಹರಿಪ್ರಸಾದ್ ಚೌರಾಸಿಯ) ಅವರೊಂದಿಗೆ ಸಹಬಾನ್ಸುರಿ ವಾದಕನಾಗಿ ಕಛೇರಿ ಕೊಡುತ್ತಿದ್ದಾಗಲೆಲ್ಲ ಜಾಕಿರ್ ಅವರೇ ತಬಲಾ ನುಡಿಸುತ್ತಿದ್ದದ್ದು. ಆಗಲೇ ಇವರೊಂದಿಗೆ ಪರಿಪೂರ್ಣ ಕಛೇರಿ ನೀಡಬೇಕು ಎಂಬ ಕನಸು ಕಂಡಿದ್ದೆ. 10 ವರ್ಷಗಳ ಹಿಂದೆ ಈ ಕನಸು ನನಸಾಗಿ ದೇಶ ವಿದೇಶಗಳ ಹಲವಾರು ಕಛೇರಿಗಳಲ್ಲಿ ಇಬ್ಬರೂ ಜೊತೆಯಾಗಿಯೇ ನುಡಿಸಿದ್ದೇವೆ. ನಮ್ಮಿಬ್ಬರ ಜುಗಲಬಂದಿ (ತಬಲಾ–ಬಾನ್ಸುರಿ) ಅನೇಕ ದೇಶಗಳಲ್ಲಿ 'ಕ್ರೌಡ್ ಪುಲ್ಲಿಂಗ್' ಕಛೇರಿಗಳಾಗಿದ್ದವು. ಜಾಕಿರ್ ಅವರಿಂದ ನಾನು ಸಂಗೀತದ ಹಲವಾರು ವಿಚಾರಗಳನ್ನು ಕಲಿತಿದ್ದೇನೆ. ನನ್ನ ಮಾನಸ ಗುರು, ಮೆಂಟರ್, ಅಣ್ಣ ಎಲ್ಲವೂ ಆಗಿದ್ದರು.

ಅನೇಕ ಸಲ ವೇದಿಕೆಯಲ್ಲಿ ನುಡಿಸುವಾಗಲೇ ಸಂಗೀತ ಪಾಠವನ್ನು ನನಗೆ ಹೇಳಿಕೊಟ್ಟಿದ್ದಿದೆ. ಹಿಂದೂಸ್ತಾನಿ ಸಂಗೀತದ ಚೀಜ್, ಬಂದೀಶ್, ಠುಮ್ರಿ ನುಡಿಸುವಾಗ ರಾಗವನ್ನು ಹೇಗೆ ವಿಭಿನ್ನವಾಗಿ ಪ್ರಸ್ತುತಪಡಿಸಬಹುದು, ಕೇಳುಗರನ್ನು ಹೇಗೆ ಸೆಳೆಯಬಹುದು, ಹೇಗೆ ಪ್ರಯೋಗಗಳನ್ನು ಮಾಡಬಹುದು ಎಂಬುದನ್ನು ಅವರಿಂದ ಕಲಿತಿದ್ದೇನೆ. ವೇದಿಕೆ ಹತ್ತಿದಾಗ ನಗುಮುಖದಿಂದಲೇ ಇರಬೇಕು, ನಮ್ಮ ಮುಖದಲ್ಲಿ ಆತಂಕ, ಒತ್ತಡ ಕೇಳುಗರಿಗೆ ಕಾಣಬಾರದು, ಕೇಳುಗರ ಮನೋಭಾವನೆ ಅರಿತು ನುಡಿಸಬೇಕು, ನಮ್ಮ ಮನೋಧರ್ಮ ಅವರ ಅಂತರಂಗವನ್ನು ತಟ್ಟಬೇಕು ಎಂಬೆಲ್ಲ ಹಿತನುಡಿಗಳನ್ನು ನನಗೆ ಯಾವತ್ತೂ ಹೇಳುತ್ತಿದ್ದರು. ಇದು ನನಗೆ ಬಾನ್ಸುರಿಯಲ್ಲಿ ಎತ್ತರಕ್ಕೆ ಏರಲು ಸಹಕಾರಿಯಾಯಿತು.

ಶಾಸ್ತ್ರೀಯ ಸಂಗೀತದ 'ರಿಯಲ್ ಲಿಜೆಂಡ್' ಅಂದರೆ ಜಾಕಿರ್. ತಬಲಾ ಲಯದ ಮೂಲಕವೇ ಪ್ರೇಕ್ಷಕರನ್ನು ತೊಡಗಿಸಿಕೊಳ್ಳುತ್ತಿದ್ದ ರೀತಿ ಅನನ್ಯ. ಕೇಳುಗರೊಂದಿಗೆ ಅವರು ನಡೆಸುತ್ತಿದ್ದ 'ಸವಾಲ್–ಜವಾಬ್' ಎಂದಿಗೂ ಆಪ್ಯಾಯಮಾನ. ವೇದಿಕೆಯಲ್ಲೂ ಸದಾ ನಗು ಮುಖ, ಕೈಬೆರಳುಗಳು ತಬಲಾ–ಡಗ್ಗಾದ ಮೇಲೆ ನಲಿದಾಡುವುದನ್ನು ನೋಡುವುದೇ ಹಬ್ಬ ಎನಿಸುತ್ತಿತ್ತು.

ಅವರ ನುಡಿಸಾಣಿಕೆ ಶೈಲಿಯಂತೂ ಅದ್ಭುತ. ವೇದಿಕೆಯಲ್ಲಿ ಜೊತೆಗಿದ್ದ ಕಲಾವಿದರನ್ನು ಅವರು ಹುರಿದುಂಬಿಸುವುದು ಕೂಡ ನಮಗೆ ವಿಭಿನ್ನ ಅನುಭವ ನೀಡುತ್ತಿತ್ತು. ಪಂ. ಹರಿಪ್ರಸಾದ್ ಚೌರಾಸಿಯ ಜೊತೆಗೆ ಬಾನ್ಸುರಿ, ಪಂ. ಶಿವಕುಮಾರ್ ಶರ್ಮ ಅವರ ಜೊತೆಗೆ ಸಂತೂರ್, ಪಂ. ರವಿಶಂಕರ್ ಜೊತೆಗೆ ಸಿತಾರ್, ವಿದ್ವಾನ್ ವಿಕ್ಕು ವಿನಾಯಕರಾಮ್ ಜೊತೆಗೆ ತಬಲಾ–ಘಟಂ ಜುಗಲಬಂದಿ, ಪಂ. ಬಿರ್ಜು ಮಹಾರಾಜ್ ಅವರೊಂದಿಗೆ ಕಥಕ್–ತಬಲಾ... ಹೀಗೆ ಘಟಾನುಘಟಿ ಸಂಗೀತಗಾರರ ಜೊತೆಗೆ ಅವರು ನಡೆಸಿಕೊಟ್ಟ ಜುಗಲಬಂದಿ ಕಛೇರಿಗಳು, ಪಂ. ಭೀಮಸೇನ ಜೋಶಿ, ಪಂ. ಜಸರಾಜ್ ಅವರಿಗೆ ನೀಡುತ್ತಿದ್ದ ತಬಲಾ ಸಾಥಿ ಎಲ್ಲವೂ ಯಶಸ್ಸಿನ ಉತ್ತುಂಗಕ್ಕೇರಿದಂಥವು.



ಸಿನಿಮಾ ನಟನೆಯಲ್ಲೂ ಜಾಕಿರ್ ಸೈ ಎನ್ನಿಸಿಕೊಂಡಿದ್ದರು. 1998ರಲ್ಲಿ ನಟಿ ಶಬಾನಾ ಅಜ್ಮಿ ಜೊತೆಗೆ 'ಶಾನ್' ಸಿನಿಮಾದಲ್ಲಿ ನಟಿಸಿದ್ದರು. ಹಲವಾರು ಹಾಲಿವುಡ್ ಬಾಲಿವುಡ್ ಸಿನಿಮಾಗಳಿಗೆ ಸಂಗೀತ ನಿರ್ದೇಶನ ಮಾಡಿದ್ದರು. 'ಹೀಟ್ ಅಂಡ್ ಡಸ್ಟ್' ಚಿತ್ರಕ್ಕೆ ಸಂಗೀತ ನೀಡಿದ್ದಲ್ಲದೆ ನಟನೆಯನ್ನೂ ಮಾಡಿದ್ದಾರೆ. ಈ ಚಿತ್ರ ಕಾನ್ ಚಿತ್ರೋತ್ಸವಕ್ಕೆ ನಾಮನಿರ್ದೇಶನವೂ ಆಗಿತ್ತು.

ವೇದಿಕೆಯ ಆಚೆಗೂ ಜಾಕಿರ್ ಬಹಳ ಸ್ನೇಹಜೀವಿ. ಎಲ್ಲರನ್ನೂ ಪ್ರೀತಿಯಿಂದಲೇ ಮಾತನಾಡಿಸುತ್ತಿದ್ದುದು ನಾನು ಅವರಲ್ಲಿ ಕಂಡ ಬಹುದೊಡ್ಡ ಗುಣ. ನಾವು ವಿದೇಶಗಳಿಗೆ ಸಂಗೀತ ಪ್ರವಾಸಕ್ಕೆ ಹೋದಾಗಲೆಲ್ಲ ಅವರು ಮೊದಲು ಹುಡುಕುತ್ತಿದ್ದುದು ಒಳ್ಳೆಯ ಹೋಟೆಲ್ ಅನ್ನು. ಬೇರೆ ಬೇರೆ ರೀತಿಯ ತಿಂಡಿ ತಿನಿಸುಗಳ ರುಚಿ ನೋಡುವುದು ಅವರಿಗೆ ಬಹಳ ಪ್ರಿಯ. ಸಿನಿಮಾ ಸಂಗೀತ ಕೇಳುವುದು, ಕ್ರಿಕೆಟ್ ನೋಡುವುದು, ಚೆಸ್ ಆಡುವುದು ಅವರ ಮೆಚ್ಚಿನ ಹವ್ಯಾಸಗಳು.

2010ರಲ್ಲಿ, ಸ್ಕಾಟ್ಲೆಂಡ್‌ನಲ್ಲಿ ಜಾಕಿರ್ ಹುಸೇನ್ ಅವರೊಂದಿಗೆ ನಾನು ನನ್ನ ಮೊದಲ ಕಛೇರಿ ನೀಡಿದೆ. ಆ ಕಛೇರಿ ನೆನಪು ನನ್ನ ಸಂಗೀತದ ಬದುಕಿನಲ್ಲಿ ಎಂದಿಗೂ ಅವಿಸ್ಮರಣೀಯ.

ಅವರ ನಿಧನದಿಂದ ಸಂಗೀತ ಕ್ಷೇತ್ರದಲ್ಲಿ ನಿರ್ವಾತ ಏರ್ಪಟ್ಟಿದೆ. ಇಡೀ ವಿಶ್ವಕ್ಕೆ ದೊಡ್ಡ ನಷ್ಟವಾಗಿದೆ. ಪ್ರಣಾಮ್ ಜಾಕಿರ್ ಭಾಯ್!

ಪ್ರತಿಕ್ರಿಯಿಸಿ: feedback@sudha.co.in